# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ**40/2017**

**ಪಿ.ಡಬ್ಲ್ಯೂಃ1,** ಮಹ್ಮದ ಇಸ್ಮಾಯಿಲ್

ದಿನಾಂಕ :**20-07-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು :- ಶ್ರೀ ಸಿ ಬಿ ಎ ವಕೀಲರಿಂದ

ನಾನು ಮತ್ತು ನನ್ನ ಕಾಕ ಹೋಗಿ ಹಕ್ಕು ಬದಲಾವಣೆಗೆ ಅರ್ಜಿ ಕೊಟ್ಟೇವು. ನನ್ನ ಮುತ್ಯಾನ ಹೆಸರಿಗೆ ಇದ್ದ ಭೂಮಿ ನಮ್ಮ ಹೆಸರಿಗೆ ಮಾಡಿ ಅಂತಾ ಅರ್ಜಿ ಕೊಟ್ಟಿದೇವು. ಆ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ವಾದ ಪತ್ರದಲ್ಲಿ ನನ್ನ ಮುತ್ಯಾನ ಸತ್ತ ನಂತರ ನನ್ನ ತಂದೆ ಒಬ್ಬನೆ ಮಗ ಇರುವುದರಿಂದ ಅವರು ತೀರಿಕೊಂಡಿರುವುದರಿಂದ ನನಗೆ ಸೇರಬೇಕು ಎಂದು ಬರೆಸಿದ್ದೇನೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ಹಕ್ಕು ಬದಲಾವಣೆಗೆ 20 ವರ್ಷದ ಹಿಂದೆ ಅರ್ಜಿ ಕೊಟ್ಟಿದೇವು. ದಾವೆ ಹಾಕುವ ಮೊದಲು ನನ್ನ ತಾಯಿ ಜೀವಂತ ಇದ್ದರು. ಅದೇ ರೀತಿ ನನ್ನ ತಂದೆಯ ಅಣ್ಣಾ ತಮ್ಮಂದಿರು ಜೀವಂತ ಇದ್ದರು ಎಂದರೆ ಸರಿ. 1975 ರ ಸಮಯದಲ್ಲಿ ದಾವಾ ಸ್ವತ್ತುಗಳು ಅಷ್ಟೊಂದು ಬೆಲೆ ಬಾಳುವ ಸ್ವತ್ತುಗಳಾಗಿರುವುದಿಲ್ಲ ಮಸಾರಿ ಇತ್ತು ಎಂದರೆ ಸರಿಯಲ್ಲ.

ಸದರಿ ಜಮೀನು ಬೆಲೆ ಬಾಳದ ಕಾರಣ ನನ್ನ ತಾಯಿ ಹಾಗೂ ಇತರರು 2 ನೇ ಪ್ರತಿವಾದಿಗೆ ಮಾರಟ ಮಾಡಿ ಕಬ್ಜೆ ಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನೊಂದಣಿ ಮಾಡಿಸಿ ಕೊಡುವಂತೆ ಕೇಳಿದ್ದಕ್ಕೆ ನನ್ನ ತಂದೆ ಅದು ಬೆಲೆ ಬಾಳುವುದಿಲ್ಲ ಕಬ್ಜೆ ಕೊಟ್ಟಿದ್ದೇವೆ ಎಂದು ಹೇಳಿದ್ದರು ಎಂದರೆ ಸಾಕ್ಷಿ ಅವು ಎಲ್ಲಾ ಸುಳ್ಳು ಎಂದು ಹೇಳುತ್ತಾರೆ. ಸದರಿ ಪತ್ರವನ್ನು ಮೂಲ ಪ್ರತಿಯನ್ನು ಕಂದಾಯ ಇಲಾಖೆಯರಿಗೆ ಕೊಟ್ಟು 2 ನೇ ಪ್ರತಿವಾದಿ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಅವರು ಹೆಸರಿಗೆ ಇಲ್ಲ ಎಂದು ಹೇಳುತ್ತಾರೆ. ಈಗ ಸುಮಾರು 22 ವರ್ಷಗಳಿಂದ ಅವರ ಹೆಸರಿಗೆ ಪಹಣಿ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿ ಮೂಲ ಪ್ರತಿ ಹಾಗೂ ಮುಟೇಶನ ಆದೇಶ ನಾಶವಾಗಿದೆ ಎಂದು ಕಂದಾಯ ಇಲಾಖೆಯವರ ಕಡೆಯಿಂದ ಸುಳ್ಳು ಬರೆಸಿ ಹಾಕಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿಗೆ ಮೂಲ ದಾಖಲೆ ತಂದು ತೋರಿಸಿ ಪಾಟಿ ಸವಾಲು ಮಾಡಲು ಕಾಲವಕಾಶ ಕೋರಿದ್ದು ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿತ್ತಾಪೂರ